Publication : Hosa Diganta Edition: Bangalore Date : 27th November 2016

# ಸುಗಮ ವ್ಯವಹಾರಕ್ಕೆ ಸಹಕಾರಿ ಪೇವರ್ಲ್ಡ್ ಎಂಪೋಸ್ ಸಾಧನ

**ಬೆಂಗಳೂರು:** ವ್ಯಾಲೆಟ್ ಸಂಸ್ಥೆಯಾದ ಪೇವರ್ಲ್ಡ್ ಗ್ರಾಮಾಂತರ, ಪಟ್ಟಣ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿನ ಸಹಸ್ರಾರು ಸಣ್ಣ ವ್ಯಾಪಾರಿಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಪೇವರ್ಲ್ಡ್ ಎಂಪೋಸ್ (ಮೊಬೈಲ್ ಪಾಯಿಂಟ್ ಆಫ್ ಸೇಲ್) ಸಾಧನವನ್ನು ಬಿಡುಗಡೆಗೊಳಿಸಿದೆ.

ಎಂಪೋಸ್, ವ್ಯಾಪಾರಿಗಳಿಗೆ ಇದರ ಮೂಲಕ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ ಗ್ರಾಹಕರಿಂದ ಹಣ ವರ್ಗಾಯಿಸಿಕೊಳ್ಳಲು ಸಾಧ್ಯವಾಗಲಿದೆ. ಸಣ್ಣ ರಿಟೇಲರ್‌ಗಳು ಮತ್ತು ಸಗಟು ವ್ಯಾಪಾರಸ್ಥರಿಗೆ ಪೇವರ್ಲ್ಡ್ ಎಂಪೋಸ್ ವರದಾಯಕವಾಗಲಿದೆ.

ನಗದು ಕೊರತೆ ತೀವ್ರವಾಗಿರುವ ಈ ಸಂದರ್ಭದಲ್ಲಿ ಗ್ರಾಹಕರಿಂದ ಯಾವುದೇ ಬ್ಯಾಂಕ್‌ನ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಪಡೆದು ಈ ಸಾಧನದಲ್ಲಿ ಸ್ವೈಪ್ ಮಾಡುವ ಮೂಲಕ ಹಣ ಸ್ವೀಕರಿಸಬಹುದು. ಪೇವರ್ಲ್ಡ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಜತೆಗೆ ಎಂಪೋಸ್‌ಗಳನ್ನು ನಿರ್ವಹಿಸಲು ಸಹಯೋಗ ಒಪ್ಪಂದ ಮಾಡಿಕೊಂಡಿದೆ.

**ಚಿಲ್ಲರೆ ವ್ಯಾಪಾರಿಗಳಿಗೆ ಸಹಕಾರಿ**

ಎಂಪೋಸ್ ಸಾಧನಗಳ ಮೂಲಕ ಆರ್‌ಬಿಐ ನಿಯಮದ ಪ್ರಕಾರ 2 ಸಾವಿರ ರೂಪಾಯಿವರೆಗೆ ಹಣ ಪಾವತಿ ಸಾಧ್ಯ. ಅಗ್ಗದ ವೆಚ್ಚದ ಈ ಸಾಧನವು ಚಿಲ್ಲರೆ ವ್ಯಾಪಾರಿಗಳಿಗೆ ಸಹಕಾರಿಯಾಗಲಿದೆ. ಈ ಬಗ್ಗೆ ಕಂಪೆನಿಯ ಸಿಒಒ ಪ್ರವೀಣ್ ಧಾಭಾಯಿ ಮಾತನಾಡಿ, ಪೇವರ್ಲ್ಡ್ ಎಂಪೋಸ್‌ಗಳನ್ನು ಸರಳ ಹಾಗೂ ಸುಲಭವಾಗಿ ನಿರ್ವಹಿಸಬಹುದಾಗಿದೆ. ರಿಟೇಲರ್ ಸ್ಮಾರ್ಟ್‌ಫೋನ್‌ನಲ್ಲಿ ಪೇವರ್ಲ್ಡ್ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಂಡು, ಬ್ಲೂಟೂತ್ ನೆರವಿನಿಂದ ಕಾರ್ಡ್ ರೀಡರ್‌ಗೆ ಸಂಪರ್ಕ ಪಡೆಯಬಹುದು. ನಂತರ ಗ್ರಾಹಕರು ಡೆಬಿಟ್, ಕ್ರೆಡಿಟ್ ಕಾರ್ಡ್ ಮೂಲಕ ಸ್ವೈಪ್ ಮಾಡಬಹುದು ಎಂದು ತಿಳಿಸಿದ್ದಾರೆ.

Payworld mPOS - A boon for small merchants